ಬೆಳಗಾಂ ಜಿಲ್ಲೆಯಲ್ಲಿನ ಮಹಿಳೆಯರ ಕಲ್ಯಾಣ ಕೇಂದ್ರ ಹಾಗೂ ಬಾಲವಾಡಿಗಳು

೩೯೩. (೧೨೨) ಶ್ರೀ ಪಿ.ಪಿ. ಹೆಗಡೆ (ಚಿಕ್ಕೋಡಿ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ೧೯೭೯–೮೦ರಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಒಟ್ಟು ಎಷ್ಟು ಮಹಿಳಾ ಕಲ್ಯಾಣ ಕೇಂದ್ರ ಹಾಗೂ ಬಾಲವಾಡಿಗಳಿದ್ದವು? (ತಾಲ್ಲೂಕುವಾರು ವಿವರಗಳನ್ನು ನೀಡಬೇಕೆಂದು ವಿನಂತಿ)

ಆ) ೧೯೮೦–೮೧, ೧೯೮೧,೮೨ ಮತ್ತು ೧೯೮೨–೮೩ರಲ್ಲಿ ಈ ಜಿಲ್ಲೆಯಲ್ಲಿ ಸರ್ಕಾರ ಸ್ಥಾಪಿಸಿದ ಮಹಿಳಾ ಕಲ್ಯಾಣ ಕೇಂದ್ರ ಹಾಗೂ ಬಾಲವಾಡಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡಬೇಕಾಗಿ ವಿನಂತಿ)

ಇ) ೧೯೮೩–೮೪ನೇ ಸಾಲಿನಲ್ಲಿ ಈ ಜಿಲ್ಲೆಯಲ್ಲಿ ಸರ್ಕಾರದವರು ತೆರೆಯಲಿಚ್ಚಿಸುವ ಮಹಿಳಾ ಕಲ್ಯಾಣ ಕೇಂದ್ರ ಹಾಗೂ ಬಾಲವಾಡಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ಗಳನ್ನು ನೀಡತಕ್ಕದ್ದು)

ಈ) ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಶೇಕಡ ೧೮ರ ಹಣದಲ್ಲಿ ಆಯಾಯ ತಾಲ್ಲೂಕುಗಳಲ್ಲಿ ಬಾಲವಾಡಿಗಳನ್ನು ತೆರೆದಿರುವ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಹೆಸರುಗಳನ್ನು ಹಾಗೂ ಎಷ್ಟೆಷ್ಟು ಬಾಲವಾಡಿಗಳನ್ನು ಒಂದೊಂದು ಮಂಡಳಿ ತೆರೆದಿರುತ್ತದೆ, ವಿವರ ಗಳನ್ನು ಒದಗಿಸುವುದು.

ಉ) ಬಾಲವಾಡಿ ಆರ್ಗನೈಜರ್ ಮತ್ತು ನಿರ್ವಾಹಕರಿಗೆ ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ತಿಂಗಳಿಗೆ ನೀಡಲಾಗುತ್ತಿರುವ ಹಣದ ಮೊತ್ತ ಎಷ್ಟು ?

ಶ್ರೀ ರಾಜಪರ್ಧನ್ (ಸಮಾಜ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ೩೧–೩–೧೯೮೦ರವರೆಗೆ ಒಟ್ಟು ೩೦ ಮಹಿಳಾ ಕೇಂದ್ರಗಳನ್ನು ಇಲಾಖೆ ಈ ಕೆಳಕಂಡ ತಾಲ್ಲೂಕುಗಳಲ್ಲಿ ನಡೆಸುತ್ತಾ ಬಂದಿದೆ.

೧.	ರಾಯಬಾಗ್	— ೪
೨.	ಹುಕ್ಕೇರಿ	— ೨
೩.	ಬೆಳಗಾಂ	— ೪
೪.	ಖಾನಾಪುರ	— ೨
೫.	ಬೈಲಹೊಂಗಲ	— ೩
೬.	ಚಿಕ್ಕೋಡಿ	— ೫
೭.	ನಿಪ್ಪಾಣಿ	— ೧
೮.	ರಾಮದುರ್ಗ	— ೨
೯.	ಅಥಣಿ	— ೪
೧೨.	ಗೋಕಾಕ್	— ೩
	ಮೊತ್ತ	೩೦

ಆ) ೧೯೮೦–೮೧—ಅಥಣಿ ತಾಲ್ಲೂಕಿನಲ್ಲಿ ಒಂದು
೧೯೮೧–೮೨, ೧೯೮೨–೮೩ ಇಲ್ಲಾ

ಇ) ಇನ್ನೂ ನಿರ್ಧರಿಸಿಲ್ಲ.

ಈ) ೧. ಖಾನಾಪುರ — ೧೦
೨. ಚಿಕ್ಕೋಡಿ — ೪
೩. ಅಥಣಿ — ೬
೪. ಗೋಕಾಕ್ — ೨

ಉ) ಸಂಚಾಲಿಕೆಗೆ ತಿಂಗಳಿಗೆ ೧೫೦ ರೂ.
ನಿರ್ವಾಹಕಿಗೆ ತಿಂಗಳಿಗೆ ೧೦೦ ರೂ.

ಶ್ರೀ ಪಿ. ಪಿ. ಹೆಗರೆ.— ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದ ಪ್ರಕಾರ ತಾರೀಖು ೩೧–೩–೧೯೮೦ರವರೆಗೆ ೩೦ ಮಹಿಳಾ ಕೇಂದ್ರಗಳನ್ನು ಮತ್ತು ಬಾಲವಾಡಿಗಳನ್ನು ನಡೆಸುತ್ತಿದ್ದರೆ ೧೯೮೦–೮೧ರಲ್ಲಿ ಒಂದನ್ನು ಮಾತ್ರ ಹೊಸದಾಗಿ ಪ್ರಾರಂಭ ಮಾಡಲಾಗಿದೆ ಮತ್ತು ೧೯೮೧–೮೨ರಲ್ಲಿ ಮತ್ತು ೧೯೮೨–೮೩ರಲ್ಲಿ ಒಂದನ್ನೂ ಸಹ ಪ್ರಾರಂಭ ಮಾಡಿಲ್ಲ. ಹರಿಜನರಿಸಿ ಹೆಚ್ಚು ಉತ್ತೇಜನ ಕೊಡ ಬೇಕೆಂಬ ಉದ್ದೇಶದಿಂದ ಪ್ರತಿಯೊಂದು ಗ್ರಾಮದಲ್ಲಿಯೂ ಮಹಿಳಾ ಕೇಂದ್ರಗಳನ್ನು ಮತ್ತು ಬಾಲ ವಾಡಿಗಳನ್ನು ತೆರೆಯುವುದು ಒಳ್ಳೆಯದೆಂದು ಶ್ರೀ ದೇವರಾಜ ಅರಸ್ ಅವರ ಕಾಲದಲ್ಲೇ ಈ ಒಂದು ಯೋಜನೆಯನ್ನು ಪ್ರಾರಂಭ ಮಾಡಿದರು. ಆದರೆ ಕಳೆದ ೩ ವರ್ಷಗಳಿಂದ ಒಂದನ್ನು ಮಾತ್ರ ತೆರೆಯ ಲಾಗಿದೆ. ೧೯೮೩–೮೪ನೇ ಸಾಲಿನಲ್ಲಿ ಇಂತಹ ಕೇಂದ್ರಗಳನ್ನು ತೆರೆಯುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ವೆಂದು ಹೇಳಿದ್ದಾರೆ. ಅಂದರೆ ಈಗಿನ ಸರ್ಕಾರ ಈ ಒಂದು ಯೋಜನೆಯಿಂದ ಹಿಂದೆ ಸರಿಯುತ್ತಿದೆಯೇ ಎಂದು ನಾನು ಕೇಳುತ್ತೇನೆ? ಶ್ರೀ ದೇವರಾಜ ಅರಸ್ ಅವರು ಯಾವ ಒಂದು ಆಧಾರದ ಮೇಲೆ ಈ ಯೋಜನೆಯನ್ನು ಪ್ರಾರಂಭ ಮಾಡಿದರೋ ಅದನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಈ ಸರ್ಕಾರದ ನೀತಿ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು?

ಶ್ರೀ ರಾಜವರ್ಧನ್.— ಈ ಹಿಂದಿನ ಸರ್ಕಾರ ಕಳೆದ ೩ ವರ್ಷಗಳಲ್ಲಿ ಒಂದು ಕೇಂದ್ರವನ್ನು ಪ್ರಾರಂಭ ಮಾಡಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಮಹಿಳಾ ಕೇಂದ್ರಗಳನ್ನು ಹೆಚ್ಚು ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ಇನ್ನೂ ನಿರ್ಧಾರ ಕೈಕೊಂಡಿಲ್ಲ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳುವಂತಹ ಸೂಚನೆ ಬಹಳ ಚೆನ್ನಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ.ಪಿ. ಹೆಗರೆ.—ಮತ್ತೊಂದು ಪ್ರಶ್ನೆಗೆ ತಾಲ್ಲೂಕು ಬೋರ್ಡ್‌ನವರು ಶೇಕಡಾ ೧೮ರಷ್ಟು ಹಣದೊಳಗೆ ಮಹಿಳಾ ಕೇಂದ್ರ ಮತ್ತು ಬಾಲವಾಡಿಗಳನ್ನು ಎಷ್ಟು ಸ್ಥಾಪನೆ ಮಾಡಿದ್ದಾರೆಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ಖಾನಾಪುರದಲ್ಲಿ ೧೦, ಚಿಕ್ಕೋಡಿಯಲ್ಲಿ ೪, ಅಥಣಿಯೊಳಗೆ ೬, ಗೋಕಾಕ್‌ದೊಳಗೆ ೨, ಹೀಗೆ ೨೨ ಕೇಂದ್ರಗಳನ್ನು ತೆರೆಯಲಾಗಿದೆಯೆಂದು ಹೇಳಿ ದ್ದಾರೆ ಬಹಳ ಸಂತೋಷದ ಸಂಗತಿ. ಆದರೆ ಅಲ್ಲಿ ಕೆಲಸ ಮಾಡತಕ್ಕ ಆರ್ಗನೈಸರ್ ಅವರಿಗೆ ತಿಂಗಳ ಪಗಾರ ೧೫೦, ಕಂಡಕ್ಟರ್ಸ್‌ಗಳಿಗೆ ತಿಂಗಳ ಪಗಾರ ೧೦೦ ರೂಪಾಯಿ ಕೊಡುತ್ತಿದ್ದೀರಿ, ಇಷ್ಟು ಸಂಬಳದೊಳಗೆ ಯಾರು ಕೆಲಸ ಮಾಡುವುದಕ್ಕೆ ಸಾಧ್ಯವಿದೆ? ಸಮಾಜ ಕಲ್ಯಾಣ ಇಲಾಖೆಯವರು ತಾಲ್ಲೂಕು ಬೋರ್ಡ್‌ನವರಿಗೆ ಇನ್ಸ್‌ಟ್ರಕ್ಷನ್ ಕೊಟ್ಟಿದ್ದಾರೆ. ಬಾಲವಾಡಿಗಳಲ್ಲಿ ಕೆಲಸ ಮಾಡತಕ್ಕ ಕಂಡಕ್ಟರ್ಸ್‌ಗಳಿಗೆ ತಿಂಗಳಿಗೆ ೧೦೦ ರೂಪಾಯಿ ಆರ್ಗನೈಸರ್‌ಗಳಿಗೆ ತಿಂಗಳಿಗೆ ೧೫೦ ರೂಪಾಯಿ ಕೊಡ ಬೇಕೆಂದು ರಿಸ್ಟ್ರಿಕ್ಷನ್ ಹಾಕಿದ್ದಾರೆ. ಇಷ್ಟು ಕಡಿಮೆ ಸಂಬಳ ಏತಕ್ಕೆ ಕೊಡುತ್ತೀರಿ? ಸಮಾಜ ಕಲ್ಯಾಣ ಇಲಾಖೆಯವರು ಸಂಬಳವನ್ನು ಏತಕ್ಕೆ ಜಾಸ್ತಿ ಕೊಡುತ್ತಿಲ್ಲ?

ಶ್ರೀ ರಾಜವರ್ಧನ್.—ಇದು ಆಯಾಯ ತಾಲ್ಲೂಕು ಬೋರ್ಡ್‌ಗಳ ಹಣಕಾಸಿನ ವಿಷಯಗಳಿಗೆ ಸಂಬಂಧಪಟ್ಟ ವಿಚಾರ. ಅವರು ಶೇಕಡಾ ೧೮ರಷ್ಟು ಹಣದಲ್ಲಿ ಬಾಲವಾಡಿ ಮತ್ತು ಮಹಿಳಾ ಕೇಂದ್ರ ಗಳನ್ನು ನಡೆಸುತ್ತಿದ್ದಾರೆ. ತಾಲ್ಲೂಕು ಬೋರ್ಡ್‌ಗಳಿಗೆ ಹಣಕಾಸಿನ ಕೊರತೆ ಇದೆ. ತಾಲ್ಲೂಕು ಬೋರ್ಡ್‌ನವರು ನಡೆಸುತ್ತಿರುವ ಮಹಿಳಾಕೇಂದ್ರ ಮತ್ತು ಬಾಲವಾಡಿಗಳನ್ನು ಸರ್ಕಾರವೇ ವಹಿಸಿ ಕೊಳ್ಳಬೇಕೆಂದು ಸರ್ಕಾರಕ್ಕೆ ಬೇಡಿಕೆಗಳು ಬರುತ್ತಿವೆ. ಅವರನ್ನು ಜಾಸ್ತಿ ಕೊಡಿಯೆಂದು ನಾವು ಒತ್ತಾಯ ಮಾಡುವ ಹಾಗೆ ಇಲ್ಲ. ಇದರ ಬಗ್ಗೆ ಇಷ್ಟು ಮಾತ್ರ ಹೇಳಬಹುದು.

ಶ್ರೀ ಪಿ.ಪಿ. ಹೆಗರೆ.—ಮಾನ್ಯ ಮಂತ್ರಿಗಳು ಒಂದು ಸಂಗತಿಯನ್ನು ಲಕ್ಷದಲ್ಲಿಡಬೇಕು. ಹಣ ಕಾಸಿನ ಕೊರತೆ ಎಲ್ಲಾ ಕಡೆ ಇರುತ್ತದೆ. ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿ, ಕಾರ್ಪೊರೇಷನ್

ಎಲ್ಲಾ ಕಡೆಗಳಲ್ಲೂ ಹಣಕಾಸಿನ ತೊಂದರೆ ಇರುತ್ತದೆ. ತಾಲ್ಲೂಕು ಬೋರ್ಡ್‌ನವರು ಮಹಿಳಾಕೇಂದ್ರ ಮತ್ತು ಬಾಲವಾಡಿಗಳನ್ನು ಪ್ರಾರಂಭ ಮಾಡಿದರೆ ತಾವು ಅವರಿಗೆ ಪ್ರೋತ್ಸಾಹ ಕೊಡಬೇಕು. ಅಲ್ಲಿ ಏನು ಮಾಡುತ್ತಾರೆಂದರೆ ಬಾಲಕರಿಗೆ ಕೊಡುವ ಆಹಾರ ಪದಾರ್ಥಗಳನ್ನು ಕಂಡಕ್ಟರ್‌ಗಳು ಅವರ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಇದು ನನಗೆ ನೋಡಿದ ಅನುಭವ. ನಾನು ನನ್ನ ಕ್ಷೇತ್ರದಲ್ಲಿ ಇದರ ಬಗ್ಗೆ ಬಹಳಷ್ಟು ಪ್ರಯತ್ನ ಮಾಡಿದ್ದೇನೆ. ಅಲ್ಲಿ ಹಣನೂ ಇಲ್ಲ ಪೋಸ್ಟ್‌ಗಳೂ ಇಲ್ಲ. ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿಯೆಂದು ಬರೆದರೆ ಸರ್ಕಾರದವರೂ ಇದುವರೆಗೆ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಲಿಲ್ಲ. ನಾನು ಈ ವಿಷಯದ ಬಗ್ಗೆ ತಾಲ್ಲೂಕು ಬೋರ್ಡ್‌ಗಳಿಗೆ ಭೇಟಿ ಕೊಟ್ಟಿದ್ದೇನೆ. ತಾಲ್ಲೂಕು ಬೋರ್ಡ್‌ಗಳಲ್ಲಿ ಹೆಚ್ಚು ಹಣ ಕೊಡುವುದಕ್ಕೆ ಸಾಧ್ಯವಿಲ್ಲ. ಖಾನಾಪುರದಲ್ಲಿ ೧೦ ಬಾಲವಾಡಿಗಳನ್ನು ನಡೆಸುತ್ತಿದ್ದಾರೆ. ಅವರಿಗೆ ಹಣದ ಕೊರತೆ ಇದೆ, ಅಲ್ಲಿ ಕೆಲಸ ಮಾಡುತಕ್ಕವರಿಗೆ ತಿಂಗಳಿಗೆ ೧೫೦, ೧೦೨ ರೂಪಾಯಿ ಕೊಟ್ಟರೆ ಅವರು ಯಾವರೀತಿ ಕೆಲಸ ಮಾಡುವುದಕ್ಕೆ ಸಾಧ್ಯ? ತಾಲ್ಲೂಕು ಬೋರ್ಡ್‌ಗಳಲ್ಲಿ ಹಣ ವ್ಯಯ ಆಗಲಿಕ್ಕೆ ಹತ್ತಿದೆ. ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಲ್ಲಿ ಶೇಕಡ ೧೮ರಷ್ಟು ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುತ್ತಿಲ್ಲ, ಇದು ನಿಮಗೆ ಗೊತ್ತಿದೆ. ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಬದಜನರಿಗೆ ಅನುಕೂಲವಾಗತಕ್ಕ ಬಾಲವಾಡಿ ಮತ್ತು ಮಹಿಳಾ ಕೇಂದ್ರಗಳು ಸರಿಯಾಗಿ ನಡೆಯುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಸಲಹೆ ಕೊಡುತ್ತಿದ್ದೀರಿ

ಶ್ರೀ ಲಮಾಣಿ ಹೆಗ್ಗಪ್ಪ ದೇಶಪ್ಪ.—ತಾಲ್ಲೂಕು ಬೋರ್ಡ್‌ನವರು ಬಾಲವಾಡಿಗಳನ್ನು ನಡೆಸುವುದಕ್ಕೆ ಸಾಧ್ಯವಾಗಿಲ್ಲ. ತಾಲ್ಲೂಕು ಬೋರ್ಡ್‌ಗಳಿಗೆ ಏನಾದರೂ ಗ್ರಾಂಟ್ ಕೊಟ್ಟರೆ ಬಾಲವಾಡಿ ಮತ್ತು ಮಹಿಳಾ ಕೇಂದ್ರಗಳನ್ನು ಸುಧಾರಣೆ ಮಾಡಲಿಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಸರ್ಕಾರದವರು ಏನಾದರೂ ಸಹಾಯ ಮಾಡಲಿಕ್ಕೆ ಸಾಧ್ಯವಿದೆಯೆ?

ಶ್ರೀ ರಾಜವರ್ಧನ್.—ನಮ್ಮ ಇಲಾಖೆಯ ವತಿಯಿಂದ ಮಹಿಳಾಕೇಂದ್ರ ಮತ್ತು ಬಾಲವಾಡಿಗಳನ್ನು ನಾವೇ ನಡೆಸುತ್ತಿದ್ದೇವೆ. ಆದ್ದರಿಂದ ತಾಲ್ಲೂಕು ಬೋರ್ಡ್‌ನವರಿಗೆ ಸಹಾಯ ಮಾಡಿ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ. ಪಿ. ಹೆಗಡೆ.—ಮಹಿಳಾ ಕೇಂದ್ರಗಳಲ್ಲಿ ಮತ್ತು ಬಾಲವಾಡಿಗಳಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ೧೦೦, ೧೫೦ ರೂಪಾಯಿ ಸಂಬಳ ಕೊಡುವುದರಿಂದ ಭ್ರಷ್ಟಾಚಾರಕ್ಕೆ ನಾವೇ ಅವಕಾಶ ಕೊಟ್ಟ ಹಾಗೆ ಆಗುತ್ತದೆ. ಹುಡುಗರಿಗೆ ಕೊಡತಕ್ಕ ಆಹಾರ ಪದಾರ್ಥಗಳನ್ನು ತಾವು ಹೋಗಿ ತಿನ್ನಿರಿ ಎಂದು ಹೇಳಿದ ಹಾಗೆ ಆಗುತ್ತದೆ. ಸಮಾಜ ಕಲ್ಯಾಣ ಇಲಾಖೆಯವರು ಇದರ ಬಗ್ಗೆ ಲಕ್ಷ ಹರಿಸಿ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಜವರ್ಧನ್.—ಅದರ ಬಗ್ಗೆ ಗಮನಹರಿಸಲಾಗುತ್ತದೆ.

೩೯೪ (೧೨೭) ಅಧ್ಯಕ್ಷರು.—ಮಾನ್ಯ ಸದಸ್ಯರಾದ ರಾಂಭಟ್‌ರವರೇ ತಮ್ಮ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಶ್ರೀ ಕೆ. ರಾಂಭಟ್.—ಈ ಪ್ರಶ್ನೆ ಅಧಿವೇಶನ ಮುಗಿಯುವುದರೊಳಗೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಮಾಲೇರು ಎಂಬುವರಿಗೆ ಪೋಲೀಸ್‌ನವರಿಂದ ಏನು ತೊಂದರೆ ಕೊಡುವುದಿಲ್ಲ ವೆಂದು ಉತ್ತರ ಕೊಟ್ಟರೆ ಅಷ್ಟೆ ಸಾಕು.

ಅಧ್ಯಕ್ಷರು.— ತಮ್ಮ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

೩೯೫ (೧೩೮) ಶ್ರೀ ಹನುಮಗೌಡ ಪಾಟೀಲ್, ಸದಸ್ಯರು ಬಂದಿಲ್ಲ.

೩೯೬ (೧೨೫) ಶ್ರೀ ಎನ್.ಜಿ. ನಾಯಕ್, ಸದಸ್ಯರು ಬಂದಿಲ್ಲ.